**CC 1288/2020**
**CW 2 – PW 3**

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ರವರ
ನ್ಯಾಯಾಲಯ, ಚನ್ನರಾಯಪಟ್ಟಣ

**CC 1288/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಯೋಗೇಶ್ | **C.W –2** |
| ತಂದೆಯ ಹೆಸರು | ಃ | ಮರಿಯಪ್ಪ | **P.W –3** |
| ವಯಸ್ಸು | ಃ | 50 ವರ್ಷ | |
| ಉದ್ಯೋಗ | ಃ | ಖಾಸಗಿ ಕೆಲಸ | **ಪ್ರಮಾಣ ವಚನ ಬೋಧಿಸಲಾಯಿತು.** |
| ವಾಸ | ಃ | ಬೆಂಗಳೂರು | ದಿನಾಂಕಃ **18.11.2023** |

---

<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ</u>

ಚಾ ಸಾ 1, 3 ರಿಂದ 5 ರವರ ಪರಿಚಯವಿದೆ.

ದಿನಾಂಕ 27.06.2020 ರಂದು ಸುಮಾರು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ಚಾ ಸಾ 1 ರವರ ಅಕ್ಕ ಚಾ ಸಾ 3 ರವರವನ್ನು ಚನ್ನರಾಯಪಟ್ಟದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಬಂದಿದ್ದೆವು. ಸುಮಾರು ಎರಡುವರೆ ಗಂಟೆವರೆಗೆ ಕಾದಲು ಮೂಳೆ ತಜ್ಞರಾದ ಡಾ. ಮಹೇಶ್ ರವರು ಬಂದಿರಲಿಲ್ಲ. ನಂತರ ವೈದರು ಬಾರದೇ ಇದ್ದುದರಿಂದ ಚಾ ಸಾ 1 ರವರು ಮೇಲಾಧಿಕಾರಿಗಳಿಗೆ ದೂರನ್ನು ಕೊಟ್ಟಿರುತ್ತಾರೆ. ನಂತರ ನಾನು ಮತ್ತು ಚಾ ಸಾ 1 ರವರು ವಾಪಸ್ಸು ಊರಿಗೆ ಹೋಗುವಾಗ ಮಟ್ಟನವಿಲೆ ಮತ್ತು ಮಾದಹಳ್ಳಿ ಮಧ್ಯದಲ್ಲಿ ಹೋಗುತ್ತಿರುವಾಗ ಸುಮಾರು ಸಂಜೆ 04.54 ಗಂಟೆ ಸಮಯದಲ್ಲಿ ಚಾ ಸಾ 1 ರವರಿಗೆ ಒಂದು ಕರೆ ಬಂದಿರುತ್ತದೆ . ನಂತರ ಚಾ ಸಾ 1 ರವರು ವಾಹನವನ್ನು ಬದಿಗೆ ನಿಲ್ಲಿಸಿ ಮಾತನಾಡಿದಾಗ ವಿನಯ್ ಕುಮಾರ್ ಎನ್ನುವವರು ಅವಾಚ್ಯ ಶಬ್ದಗಳಿಂದ ಚಾ ಸಾ 1 ರವರಿಗೆ ಬೈದಿರುತ್ತಾರೆ ಮತ್ತು ಜಾತಿ ನಿಂಧನೆ ಮಾಡಿರುತ್ತಾರೆ. ಪೋಲೀ ನನ್ನ ಮಗನೆ , ಸೂಳೆ ನನ್ನ ಮಗನೆ, ಸಿಗು ನಿನನ್ನು ಹೂತುಹಾಕುತ್ತೇನೆ, ಧಂ ಇದ್ದರೆ ಚನ್ನರಾಯಪಟ್ಟಣಕ್ಕೆ ಬಾ ಸುಟ್ಟು ಹಾಕುತ್ತೇನೆ ಎಂದು ಬೈದಿರುತ್ತಾರೆ. ನಂತರ ದಿನಾಂಕ 28.06.2020 ರಂದು ಚಾ ಸಾ 1 ರವರು ದೂರನ್ನು ನೀಡಿರುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ**

**CC 1288/2020**
**CW 2 – PW 3**

**ಮಾನ್ಯ ಸರ್ಕಾರಿ ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಡಾ. ಮಹೇಶ್ ಅವರ ಕುಮ್ಮಕ್ಕಿನಿಂದ ಚಾ ಸಾ 1ರವರಿಗೆ ಆರೋಪಿ ಫೋನ್ ಮೂಲಕ ಬೈದು ಕೊಲೆ ಬೆದರಿಕೆ ಹಾಕಿರುತ್ತಾರೆಯೇ ಅಥವಾ ಇಲ್ಲವೇ ಎಂದು ನನಗೆ ತಿಳಿದಿರುವುದಿಲ್ಲ ಎಂದು ದಿನಾಂಕ 03.07.2020ರಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿ ಅಲ್ಲಗಳೆದಿರುವುದರಿಂದ ಸದರಿ ಹೇಳಿಕೆಯ ಭಾಗವನ್ನು ನಿ ಪಿ 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು** – ಶ್ರೀ ಡಿ ಕೆ ಎಂ ಆರೋಪಿ ಪರ ವಕೀಲರಿಂದ

ಚಾ ಸಾ 1 ನನ್ನ ಸೋದರಮಾವನ ಮಗ. ನಾನು ಸುಮಾರು 15 ವರ್ಷಗಳಿಂದ ಬೆಂಗಳೂರಿನಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡಿಕೊಂಡು ಸಂಸಾರ ಸಮೇತ ಬೆಂಗಳೂರಿನಲ್ಲಿ ವಾಸವಿದ್ದೇನೆ. ನಾನು ಘಟನೆಯ 1 ದಿನ ಪೂರ್ವದಲ್ಲಿ ಹಿರಿಸಾವೆಗೆ ಬಂದಿರುತ್ತೇನೆ. ನಾನು ಮತ್ತು ಚಾ ಸಾ 1ರವರು ಬೈಕ್ ನಲ್ಲಿ ಮತ್ತು ಚಾ ಸಾ 3ರವರು ಹಿರಿಸಾವೆಯಿಂದ ಬಸ್ ನಲ್ಲಿ ಬಂದಿರುತ್ತೇವೆ.ಚಾ ಸಾ 3ರವರು ಹಿರಿಸಾವೆಗೆ ಬಂದಿದ್ದರು, ಎಷ್ಟು ದಿನ ಮುಂಚಿತವಾಗಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಚಾ ಸಾ 3ರವರು ಬಸ್ ಹತ್ತಿಸಿದ ನಂತರ ನಾವು ಬಸ್ ನ ಹಿಂಬದಿಯಲ್ಲೇ ಚನ್ನರಾಯಪಟ್ಟಣಕ್ಕೆ ಬಂದಿದ್ದೆವು. ಚಾ ಸಾ 3ರವರ ಬಲಗೈ ನ ಮೂಳೆ ಗೆ ಪೆಟ್ಟಾಗಿರುವುದರಿಂದ ಚಿಕಿತ್ಸೆಗಾಗಿ ಚನ್ನರಾಯಪಟ್ಟಣಕ್ಕೆ ಬಂದಿದ್ದೆವು. ಸದರಿ ದಿನದಂದು ಶನಿವಾರ ಆಗಿರುತ್ತದೆ. ನಾನು ನನ್ನ ಕೆಲಸಕ್ಕೆ ರಜೆ ಮಾಡಿ ಬಂದಿರುತ್ತೇನೆ. ಹಿರಿಸಾವೆಯಿಂದ ಚನ್ನರಾಯಪಟ್ಟಣಕ್ಕೆ ಬಂದ ವಾಹನದ ಸಂಖ್ಯೆ ನನಗೆ ಗೊತ್ತಿಲ್ಲ. ಚಾ ಸಾ 1ರವರಿಗೆ ಪೋಲಿಯೋದಿಂದಾಗಿ ಎಡಗಾಲು ಅಂಗನ್ಯೂನ್ಯತೆಯಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಹಿರಿಸಾವೆಯಿಂದ 09.30 ಗಂಟೆ ಗೆ ಹೊರಟು ಚನ್ನರಾಯಪಟ್ಟಣಕ್ಕೆ 10.00 ಗಂಟೆಗೆ ಬಂದಿರುತ್ತೇವೆ . ಸದರಿ ದಿನದದಂದು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಡಾ. ಮಹೇಶ್ ರವರು

ಕರ್ತವ್ಯ ನಿರತ ವೈದ್ಯರಾಗಿದ್ದರು. ಸದರಿ ದಿನದಂದು ಡಾ. ಮಹೇಶ್ ಅವರೇ ಕರ್ತವ್ಯ ನಿರತ ವೈದ್ಯರು ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಇಟ್ಟುಕೊಂಡಿರುವುದಿಲ್ಲ. ಸರ್ಕಾರಿ ಆಸ್ಪತ್ರೆಯಲ್ಲಿ ಯಾವ ದಿನದಂದು ಯಾವ ಸಮಯದಿಂದ ಯಾವ ಸಮಯದವರೆಗೆ ಯಾವ ವೈದ್ಯರು ಕರ್ತವ್ಯದಲ್ಲಿ ಇರುತ್ತಾರೆ ಎಂಬ ವರದಿಯನ್ನು ನೋಟೀಸ್ ಬೋರ್ಡ್ ನಲ್ಲಿ ಹಾಕಿರುತ್ತಾರೆ ಎಂದರೆ ನಾನು ನೋಡಿಲ್ಲ. ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಬರುವ ಪೂರ್ವದಲ್ಲಿ ಚಾ ಸಾ *3*ರವರು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದು ನನಗೆ ಗೊತ್ತಿಲ್ಲ. ಹಿರಿಸಾವೆಯಿಂದ ಚನ್ನರಾಯಪಟ್ಟಣಕ್ಕೆ *20* ಕಿ.ಮಿ. ಅಂತರವಿದೆ . ಹಿರಿಸಾವೆಯಿಂದ ಚನ್ನರಾಯಪಟ್ಟಣಕ್ಕೆ ಬರುವಾಗ ಚಾ ಸಾ *1*ರವರು ಹೆಲ್ಮೆಟ್ ನ್ನು ಧರಿಸಿದ್ದರು. ಚಾ ಸಾ *1*ರವರು ಚಾ ಸಾ *1* ಅವರ ಮೊಬೈಲ್ ಫೋನ್ ಗೆ *ear phone* ಅಥವಾ *blue tooth* ಅಳವಡಿಸಿರಲಿಲ್ಲ . ಆಸ್ಪತ್ರೆಯಲ್ಲಿ ಸಾಮಾನ್ಯವಾಗಿ ಚಿಕಿತ್ಸೆಯನ್ನು ಪಡೆಯುವ ಪೂರ್ವದಲ್ಲಿ ಹೊರರೋಗಿ ವಿಭಾಗದಲ್ಲಿ ಚೀಟಿಯನ್ನು ತೆಗೆದುಕೊಳ್ಳಬೇಕು ಎಂದರೆ ಸರಿ. ಚಾ ಸಾ *3*ರವರೇ ಹೋಗಿ ಚೀಟಿಯನ್ನು ತೆಗೆದುಕೊಂಡಿರುತ್ತಾರೆ. ಯಾವ ವೈದ್ಯರಿಗೆ ತೋರಿಸಲು ಚಾ ಸಾ *3*ರವರು ಚೀಟಿಯನ್ನು ತೆಗೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಮಧ್ಯಾಹ್ನ *02.30* ಗಂಟೆಯವರೆಗೆ ನಾವು ಅಲ್ಲೇ ಇದ್ದೆವು. ಸದರಿ ದಿನದಂದೇ ಮಧ್ಯಾಹ್ನ *02.45 – 03.00* ಗಂಟೆ ಸಮಯದಲ್ಲಿ ಡಾ. ಮಹೇಶ್ ಅವರು ಬಂದು ಪರೀಕ್ಷಿಸಿ ವೈದ್ಯರ ಚೀಟಿಯನ್ನು ಬರೆದುಕೊಟ್ಟಿರುತ್ತಾರೆ. ನಂತರ ಚಾ ಸಾ *3*ರವರನ್ನು ಬಸ್ ಹತ್ತಿಸಿ ನಾನು ಮತ್ತು ಚಾ ಸಾ *1* ಬೈಕ್ ನಲ್ಲಿ ಹಿರಿಸಾವೆಗೆ ಹೋಗಿರುತ್ತೇವೆ. ನಾನು ಆರೋಪಿಯನ್ನು ಮುಖತ ಭೇಟಿ ಮಾಡಿಲ್ಲ. ನಾನು ಆರೋಪಿಯನ್ನು ಯಾವತ್ತು ನೋಡಿಲ್ಲ. ಚಾ ಸಾ *1*ರವರೇ ವಾಪಸ್ಸು ಹೋಗುವಾಗ ಬೈಕ್ ನ್ನು ಚಲಾಯಿಸುತ್ತಿದ್ದು, ಹೆಲ್ಮೆಟ್ ನ್ನು ಧರಿಸಿದ್ದರು. ಹಿರಿಸಾವೆ ರಸ್ತೆಯು ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ ಅನೇಕ ವಾಹನಗಳು ಓಡಾಡುತ್ತಿದ್ದು, ಶಬ್ದ ಹೆಚ್ಚಾಗಿರುತ್ತದೆ ಎಂದರೆ ಸರಿ. ಚಾ ಸಾ *1*ರವರ ಮೊಬೈಲ್ *oppo* ಕಂಪನಿಗೆ ಸೇರಿದ ಮೊಬೈಲ್ ಆಗಿದ್ದು ಗೋಲ್ಡ್ ಬಣ್ಣದ್ದಾಗಿರುತ್ತದೆ. ಚಾ ಸಾ *1*ರವರ ಮೊಬೈಲ್ ಶರ್ಟ್ ನ ಕಿಸೆಯಲ್ಲಿ ಇಟ್ಟಿದ್ದರು. ಚಾ ಸಾ *1*ರವರಿಗೆ ಕರೆ ಬಂದ ಸಂಖ್ಯೆಯನ್ನು ಚಾ ಸಾ *1*ರವರು *save* ಮಾಡಿದ್ದಾರೋ ಇಲ್ಲವೋ ನನಗೆಗೊತ್ತಿಲ್ಲ. ಚಾ ಸಾ *1*ರವರಿಗೆ ಕರೆ ಬಂದ ಸಂಖ್ಯೆ ನನಗೆ ಗೊತ್ತಿಲ್ಲ. ಚಾ ಸಾ *1*ರವರು ವಾಹನವನ್ನು ನಿಲ್ಲಿಸಿದ ಸ್ಥಳದ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಚಾ ಸಾ *1*ರವರಿಗೆ ಯಾವ ಕಾಲ್ ಬಂದಿರುತ್ತದೆ ಎಂದು ನನಗೆ

ಗೊತ್ತಿಲ್ಲ. ಚಾ ಸಾ *1*ರವರು ಸುಮಾರು *20* ನಿಮೀಷಗಳ ಕಾಲ ಫೋನ್ ನಲ್ಲಿ ಮಾತನಾಡಿರುತ್ತಾರೆ. ಫೋನ್ ಬಂದ ನಂತರ ಹಿರಿಸಾವಗೆ ನಾವು ಹೋಗಿರುತ್ತೇವೆ. ಚಾ ಸಾ *1*ರವರಿಗೆ ಬಂದ ಕರೆಯನ್ನು ನಾನು ರೆಕಾರ್ಡ್ ಮಾಡಿಕೊಂಡಿಲ್ಲ. ಚಾ ಸಾ *1*ರವರು ರೆಕಾರ್ಡ್ ಮಾಡಿಕೊಂಡಿರುತ್ತಾರೆ. ನಾನು ಮಾರನೇ ದಿನ ಬೆಳಿಗ್ಗೆ ಬೆಂಗಳೂರಿಗೆ ವಾಪಸ್ಸು ಹೋಗಿರುತ್ತೇನೆ. *2–3* ತಿಂಗಳ ನಂತರ ನಾನು ಹಿರಿಸಾವೆ ಗೆ ಬಂದಿರುತ್ತೇನೆ. ಯಾವ ದಿನಾಂಕದಂದು ನಾನು ಪೋಲೀಸ್ ಠಾಣೆಗೆ ಹೋಗಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಮತ್ತೆ ಭೇಟಿ ನೀಡಿಲ್ಲ. ನಾನು ಸದರಿ ದಿನಾಂದು ಬೆಂಗಳೂರಿನಲಿಯೇ ಇದ್ದು ಹಿರಿಸಾವೆಗೆ ಬರದೇ ಇದ್ದರೂ ಸಹ ನಾನು ಮತ್ತು ಚಾ ಸಾ *1, 3* ರವರು ಸೇರಿಕೊಂಡು ಸುಳ್ಳು ಪ್ರಕರಣವನ್ನು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ಕರೆ ಮಾಡಿ ಚಾ ಸಾ *1*ರವರಿಗೆ ಬೈದಿರುತ್ತಾರೆ ಎಂದು ನಾವೇ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ .**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.ಚನ್ನರಾಯಪಟ್ಟಣ